1978 ರ ಹಿಂದೆ ಅನುಭೋಗದಲ್ಲಿದ್ದ ಅರಣ್ಯ ಜಮೀನಿನ ಮಂಜೂರಾತಿ

2997 - ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಾಪುರ ಅರಣ್ಯ ಉಪವಿಭಾಗದಲ್ಲಿ 1978 ರಿಂದ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಸರ್ಕಾರ 3 ಎಕರೆ ಜಮೀನನ್ನು ನಿಗಧಿ ಪಡಿಸಿ ಮಂಜೂರು ಮಾಡುತ್ತಿರುವುದು ಅನ್ಯಾಯವಲ್ಲವೆ?*

ಆ) *ಹಾಗಿದ್ದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಜಮೀನಿನ ಪೂರ್ತಿ ವಿಸ್ತೀರ್ಣವನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?*

ಇ) *ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ.

ಆ) ಅಂತಹ ಪ್ರಸ್ತಾವನೆ ಇರುವುದಿಲ್ಲ.

ಇ) ಅರಣ್ಯ ಸಂರಕ್ಷಣಾ ಕಾಯ್ದೆ 1980 ರಂತೆ ಅರಣ್ಯ ಜಮೀನನ್ನು ಅರಣ್ಯೇತರ ಉದ್ದೇಶಕ್ಕೆ ಉಪಯೋಗಿಸಲು ಅವಕಾಶವಿಲ್ಲ.

ಕರ್ನಾಟಕ ಭೂ ಕಂದಾಯ ಅಧಿನಿಯಮ 94 ಸಿ ಗೆ ತಿದ್ದುಪಡಿ

2998 - ಶ್ರೀ ಗೋಪಾಲ ಪೂಜಾರಿ. ಕೆ (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಭೂ ಕಂದಾಯ ಕಾಯ್ದೆ 94 ಸಿ ತಿದ್ದುಪಡಿ ಗ್ರಾಮೀಣ ಮಟ್ಟದಲ್ಲಿ ಅರ್ಜಿದಾರರ ಮನೆ ಮತ್ತು ನಿವೇಶನವನ್ನು 5 ಸೆಂಟ್ಸ್ ಮಿತಿಗೆ ಒಳಪಟ್ಟು ಮಂಜೂರು ಮಾಡಲಾಗುತ್ತಿದ್ದು ಪಟ್ಟಣ ಪ್ರದೇಶದಲ್ಲಿ ಅನ್ವಯವಾಗುವಂತೆ ಚದರ ಅಡಿ ಮಿತಿಯಲ್ಲಿ ಮಂಜೂರು ಮಾಡಿದರೆ ಗ್ರಾಮೀಣ ಜನರಿಗೆ ಅನ್ವಯವಾಗುವುದು ನಿಜವಲ್ಲವೇ?*

ಆ) *ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಭೂಮಿಯನ್ನು ಸಕ್ರಮಗೊಳಿಸಲು ಭೂ ಕಂದಾಯ ಅಧಿನಿಯಮ 94(ಸಿ) ಅನ್ವಯ ರಚಿಸಿರುವ ನಿಯಮಾವಳಿಗಳಲ್ಲಿ ನಿವೇಶನದ ಗರಿಷ್ಟ ವಿಸ್ತೀರ್ಣ 5080 ಇರುತ್ತದೆ. ಗ್ರಾಮೀಣ ಪ್ರದೇಶಗಳಿಗೆ ಸೆಂಟ್ಸ್ ಲೆಕ್ಕದಲ್ಲಿ ಮಂಜೂರು ಮಾಡಲು ನಿಯಮಗಳಲ್ಲಿ ತಾರತಮ್ಯ ಮಾಡಿರುವುದಿಲ್ಲ.